೧೪ ಕಂಚುಗಾರನಾದ [1]ಅಲೆಕ್ಸಾಂದ್ರನು ನನ್ನನ್ನು ಬಹಳ ತೊಂದರೆ ಪಡಿಸಿದನು. ಅವನ ಕೃತ್ಯಗಳ ಹಾಗೆ,
೧೫ ಕರ್ತನು ಅವನಿಗೆ ಬದಲು ಕೊಡಲಿ. ಅವನಿಗೆ ನೀನು ಸಹ ಎಚ್ಚರವಾಗಿರು. ಯಾಕಂದರೆ ಬಹಳವಾಗಿ
[2]ನಮ್ಮ ಮಾತುಗಳನ್ನು ವಿರೋಧಿಸಿದ್ದಾನೆ.
೧೬ [3]ನನ್ನ ಮೊದಲನೇ ಪ್ರತ್ಯುತ್ತರದಲ್ಲಿ ಯಾರೂ ನನ್ನ ಸಹಾಯಕ್ಕೆ ಬರಲಿಲ್ಲ; ಎಲ್ಲರೂ ನನ್ನನ್ನು ಬಿಟ್ಟು
೧೭ ಹೋದರು. ಅದು ಅವರಿಗೆ ಎಣಿಸಲ್ಪಡದಿರಲಿ. ಆದಾಗ್ಯೂ ಕರ್ತನು ನನ್ನ ಬಳಿಯ ನಿಂತು, ನನ್ನಿಂದ ಪ್ರ
ಸಂಗವು ಪೂರೈಸಲ್ಪಡುವ ಹಾಗೆಯೂ, ಜನಾಂಗಗಳೆಲ್ಲಾ ಕೇಳುವ ಹಾಗೆಯೂ, ನನ್ನನ್ನು ಬಲ ಪಡಿಸಿದನು;
೧೮ ಮತ್ತು [4]ಸಿಂಹದ ಬಾಯಿಯಿಂದ ತಪ್ಪಿಸಲ್ಪಟ್ಟೆನು. ಮತ್ತು ಕರ್ತನು ಸಕಲ [5]ದುಷ್ಕ್ರಿಯೆಗಳಿಂದ ನನ್ನನ್ನು
ತಪ್ಪಿಸಿ, ಪರಲೋಕದಲ್ಲಿರುವ ತನ್ನ ರಾಜ್ಯದ ವರೆಗೆ ರಕ್ಷಿಸುವನು. ಅವನಿಗೆ ಯುಗ ಯುಗಾಂತರಗಳಿಗೂ
ಮಹಿಮೆಯು ಆಗಲಿ. ಆಮೆನ್.
೧೯, ೨೦ [6]ಪ್ರಿಸ್ಕಳನ್ನೂ ಅಕ್ವಿಲನನ್ನೂ ಒನೆಸಿಫೊರನ ಮನೆಯನ್ನೂ ವಂದಿಸು. ಎರಸ್ತನು ಕೊರಿಂಥದಲ್ಲಿ ನಿಂ
೨೧ ತನು. [7]ತ್ರೊಫಿಮನನ್ನು [8]ಅಸೌಖ್ಯವಾಗಿ ಮಿಲೇತದಲ್ಲಿ ಬಿಟ್ಟೆನು. [9]ಹಿಮಕಾಲಕ್ಕೆ ಮುಂಚೆ ಬರ ಎಚ್ಚರಿ
ಕೆಯಾಗಿರು.
ಯುಬೂಲನೂ, ಪೂದೆಯನೂ, ಲೀನನೂ, [10]ಕ್ಲಾದ್ಯಳೂ, ಸಹೋದರರೆಲ್ಲರೂ ನಿನ್ನನ್ನು ವಂದಿಸುತ್ತಾರೆ.
೨೨ ಕರ್ತನಾದ ಯೇಸು ಕ್ರಿಸ್ತನು ನಿನ್ನ ಆತ್ಮದ ಸಂಗಡ ಇರಲಿ. [11]ಕೃಪೆಯು ನಿಮ್ಮ ಸಂಗಡ ಇರಲಿ. ಆಮೆನ್.

---

1. ಇವನು ಅಪೊ. ಕ್ರಿ. ೧೯. ೩೩ಲ್ಲಿ ಹೇಳಲ್ಪಟ್ಟ ಅಲೆಕ್ಸಾಂದ್ರನೆಂದು ತೋರುತ್ತದೆ. ಇವನು ಪೌಲನನ್ನು ವಿರೋಧಿಸಿದ ಪ್ರಕಾರ ತಿಮೊಥೆಯನನ್ನು ಸಹ ವಿರೋಧಿಸಿರುವನು. ದೇವರ ಸೇವಕರನ್ನು ವಿರೋಧಿಸುವವರಿಗೆ ದೇವರ ಕೋಪವು ಅಗತ್ಯವಾಗಿ ಬರುವದು. (ಕೀರ್ತ. ೫. ೧೦. ೧ ತಿಮೊ. ೧. ೧೯, ೨೦.)

2. ದೇವರ ಸೇವಕರು ಸುವಾರ್ತೆಯನ್ನು ಪ್ರಸಂಗಿಸುವ ಸಮಯದಲ್ಲಿ ಅವರ ವಾಕ್ಯಗಳನ್ನು ಎದುರಿಸುವ ದುರ್ಮಾರ್ಗರ ಕ್ರಿಯೆಗಳಿಗೆ ತಕ್ಕ ಪ್ರತಿಫಲವನ್ನು ಕೊಡುವದು ದೇವರ ನೀತಿಗೆ ತಕ್ಕದ್ದಾಗಿದೆ.

3. ಇದು ಪೌಲನು ತಾನು ಸುವಾರ್ತೆಯ ಸತ್ಯಕ್ಕೆ ಸಾಕ್ಷಿಯಾಗಿ ನೇರೋ ಕೈಸರನ ಮುಂದೆ ಮೊದಲನೇ ಸಾರಿ ಪ್ರತ್ಯುತ್ತರ ಹೇಳಿದ್ದನ್ನು ಕುರಿತದ್ದು. ತನ್ನ ಕಡೆ ನಿಂತು ಸಹಾಯ ಮಾಡುವರೆಂದು ಪೌಲನು ನಂಬಿ ಇದ್ದ ಕೆಲವು ಸ್ನೇಹಿತರು ಅರಸನಿಗೆ ಭಯ ಪಟ್ಟು ತೊಲಗಿ ಹೋದರು. ಹೀಗೆ ಮನುಷ್ಯರು ಆತನನ್ನು ಕೈಬಿಟ್ಟರೂ, ನಂಬಿದ ಭಕ್ತರನ್ನು ಆದರಿಸುವ ಕರ್ತನು ಅವನನ್ನು ಕೈಬಿಡದೆ ರಾಜಸಭೆಯಲ್ಲಿಯೂ ಸುವಾರ್ತೆಯ ಸತ್ಯಗಳನ್ನು ಧೈರ್ಯವಾಗಿ ಹೇಳುವಂತೆ ಅವನನ್ನು ಬಲ ಪಡಿಸಿದನು. (ಅಪೊ. ಕ್ರಿ. ೧೮. ೯; ೨೭. ೨೩.)

4. ಇದಕ್ಕೆ ವಿದ್ವಾಂಸರು ನಾನಾ ವಿಧ ತಾತ್ಪರ್ಯಗಳನ್ನು ಹೇಳುವರು. ಇದು ನೇರೋ ಎಂಬ ಚಕ್ರವರ್ತಿಯ ಅಪ್ಪಣೆಯಿಂದ ಕ್ರೈಸ್ತರನ್ನು ಕೊಂಡ ಸಿಂಹಗಳನ್ನು ಕುರಿತದ್ದೆಂದೂ, ಘರ್ಜಿಸುವ ಸಿಂಹವಾದ ಸೈತಾನನನ್ನು ಕುರಿತದ್ದೆಂದೂ, (೧ ಪೇತ್ರ. ೫. ೮.) ಪೌಲನಿಗೆ ಸಂಭವಿಸಲಿಕ್ಕಿದ್ದ ಮರಣದ ಅಪಾಯವನ್ನು ಕುರಿತದ್ದೆಂದೂ, ನಾನಾ ಅರ್ಥಗಳನ್ನು ಹೇಳುವರು.

5. ಪೌಲನು ಕ್ರಿಸ್ತನ ಮೇಲೆ ಇಟ್ಟಿದ್ದ ಸ್ಥಿರವಾದ ನಂಬಿಕೆಯನ್ನು ಕೆಡಿಸುವ ಹಾಗೆ ಶತ್ರುಗಳು ಮಾಡಿದ ಪ್ರಯತ್ನಗಳೆಲ್ಲಾ ದುಷ್ಕ್ರಿಯೆಗಳೇ. ಅವುಗಳಿಂದ ಕೃಪೆಯುಳ್ಳ ದೇವರು ಅವನನ್ನು ರಕ್ಷಿಸಿದನು. ಮತ್ತು ಅವನನ್ನು ಪರಮ ರಾಜ್ಯಕ್ಕೆ ಪಕ್ವವಾಗ ಮಾಡಿದ್ದರಿಂದಲೂ ಆತನನ್ನು ಮನೋತ್ಸಾಹದಿಂದ ಸ್ತುತಿಸುತ್ತಾನೆ.

6. ಅಪೊ. ಕ್ರಿ. ೧೮. ೨. ವಚನದ ವ್ಯಾಖ್ಯಾನ ನೋಡ ಬೇಕು.

7. ತ್ರೊಫಿಮನು ಪೌಲನ ಸಂಗಡ ಯೆರೂಸಲೇಮಿಗೆ ಹೋಗಿದ್ದನು. (ಅಪೊ. ಕ್ರಿ. ೨೧. ೨೯.) ಅಪೊಸ್ತಲರ ಕ್ರಿಯೆಗಳ ಕಡೇ ಸಂಧಿಯಲ್ಲಿ ಹೇಳಲ್ಪಟ್ಟ ಬಂಧನದ ತರುವಾಯ ಪೌಲನು ಆಸ್ಯದಲ್ಲಿ ಪ್ರಯಾಣ ಮಾಡಿದನೆಂಬದಾಗಿ ಹೇಳುವ ಕೆಲವರ ಅಭಿಪ್ರಾಯಕ್ಕೆ ಇಲ್ಲಿ ಒಂದು ವಿಧ ಆಧಾರವುಂಟು.

8. ವಾಸಿ ಮಾಡುವ ವರವು (೧ ಕೊರಿ. ೧೨. ೯.) ಆ ಕಾಲದಲ್ಲಿದ್ದ ದೇವರ ಸೇವಕರಲ್ಲಿ ಯಾವಾಗಲೂ ತೋರಲಿಲ್ಲವೆಂದು ಇದರಿಂದ ತಿಳಿಯ ಬಹುದು. ದೇವರ ಕೃಪೆ ಹೊಂದಿದವರೆಂಬುವದಕ್ಕೆ ಗುರುತಾಗಿಯೂ, ಸುವಾರ್ತೆಯ ಸತ್ಯಕ್ಕೆ ಸಾಕ್ಷಿಯಾಗಿಯೂ, ಕ್ರಿಸ್ತನ ಮಹಿಮೆಗೆ ದೃಷ್ಟಾಂತವಾಗಿಯೂ ಈ ಅದ್ಭುತ ವರಗಳು ಆ ಕಾಲದಲ್ಲಿ ಪ್ರಕಟವಾದವೇ ಹೊರ್ತು ಬೇರೆ ಅಲ್ಲ. ಅವು ಎಲ್ಲಾ ಸಮಯಗಳಲ್ಲಿಯೂ ತೋರುವ ಹಾಗಿದ್ದರೆ, ದೇವರ ಸೇವೆಯಲ್ಲಿ ಬಹು ಪ್ರಯೋಜಕನಾಗಿದ್ದ ತ್ರೊಫಿಮನನ್ನು ಅಸೌಖ್ಯವಾಗಿ ಮಿಲೇತದಲ್ಲಿ ಬಿಡಲಾರನು.

9. ಹಿಮಕಾಲದಲ್ಲಿ ಹಡಗಯಾತ್ರೆ ನಡಿಯಲಾರದ ಕಾರಣ (ಅಪೊ. ಕ್ರಿ. ೨೭. ೧೨.) ಅದಕ್ಕೆ ಮುಂಚೆ ಬರ ಬೇಕೆಂದು ಹೇಳುತ್ತಾನೆ.

10. ಯುಬೂಲನೂ ಪೂದೆಯನೂ ಯಾರೋ ತಿಳಿಯದು. ಲೀನನು ರೋಮ ಸಭೆಗೆ ಮೊದಲನೇ ಅಧ್ಯಕ್ಷನಾಗಿದ್ದವನೆಂದೂ, ಕ್ಲಾದ್ಯಳು ಬ್ರಿಟಾನ್ಯ ದ್ವೀಪದವಳೂ, ರೋಮಾಯ ಶೇರ್ವೆಗಾರನಾದ ಪೂದೆಯನ ಹೆಂಡತಿಯೂ ಆಗಿದ್ದವಳೆಂದೂ ಕೆಲವರು ನೆನಸುತ್ತಾರೆ.

11. ಇದು ತಿಮೊಥೆಯನನ್ನೂ ಅವನ ಸಂಗಡ ದೇವರ ಸೇವೆ ಮಾಡಿದವರನ್ನೂ ಕುರಿತದ್ದು.

# THE EPISTLE OF PAUL THE APOSTLE TO TITUS.

## ಅಪೊಸ್ತಲನಾದ ಪೌಲನು ತೀತನಿಗೆ ಬರೆದ ಪತ್ರಿಕೆಯ ಪೀಠಿಕೆ.

ತೀತನನ್ನು ಕುರಿತು ಅಪೊಸ್ತಲನಾದ ಪೌಲನ ಪತ್ರಿಕೆಗಳಲ್ಲಿ ಹೇಳಿರುವ ಕೆಲವು ವರ್ತಮಾನಗಳ ಹೊರ್ತು, ಅವನನ್ನು ಕುರಿತ ಬೇರೆ ವರ್ತಮಾನಗಳೇನೂ ತಿಳಿಯದು. ಅವನ ತಂದೆ ತಾಯಿಗಳು ಅನ್ಯ ಜನಾಂಗದವರಾಗಿದ್ದರು. (ಗಲಾ. ೨. ೩.) ಅವನು ಪೌಲನಿಂದ ಗುಣ ಪಟ್ಟವನು. (ತೀತ. ೧. ೪.) ಅವನು ಹೀಗೆ ಕ್ರೈಸ್ತನಾದ ಕಾಲ ಮೊದಲ್ಗೊಂಡು ಪೌಲನ ಸಂಗಡ ಕೂಡಿ ಕೊಂಡು, ದೇವರ ಸೇವೆಯನ್ನು ಭಕ್ತಿವೈರಾಗ್ಯದಿಂದ ಮಾಡುತ್ತಾ ಬಂದನು. (೨ ಕೊರಿ. ೮. ೨೩.) ಜನಾಂಗಗಳಲ್ಲಿ ಕ್ರೈಸ್ತರಾದವರು ಮೋಶೆಯ ನ್ಯಾಯಪ್ರಮಾಣವನ್ನು ಕೈಕೊಳ್ಳ ಬೇಕಾದದ್ದು ಅವಶ್ಯವೋ? ಎಂಬ ವಿಷಯವನ್ನು ಕುರಿತು ತೀರ್ಪು ಮಾಡುವದಕ್ಕಾಗಿ ಯೆರೂಸಲೇಮಿನಲ್ಲಿ ಕೂಡಿದ ಸಂಘಕ್ಕೆ ತೀತನು ಪೌಲ ಬಾರ್ನಬ ಎಂಬವರ ಸಂಗಡ ಹೋಗಿದ್ದನು. (ಗಲಾ. ೨. ೧. ವಚನದ ವ್ಯಾಖ್ಯಾನ ನೋಡ ಬೇಕು.) ತರುವಾಯ ಅವನು, ಕೊರಿಂಥ್ಯರಿಗೆ ಪೌಲನು ಮೊದಲನೇ ಪತ್ರಿಕೆಯಲ್ಲಿ ಬರೆದ ಕಟ್ಟಳೆಗಳ ಪ್ರಕಾರ ಕೊರಿಂಥದ ಸಭೆಯವರು ನಡಿಯುತ್ತಾರೋ ಇಲ್ಲವೋ ಎಂದು ನೋಡುವದಕ್ಕಾಗಿಯೂ, ಯೆಹೂದದಲ್ಲಿ ಬಡ ಕ್ರೈಸ್ತರಿಗಾಗಿ ಧರ್ಮ ಸಹಾಯವನ್ನು ಹೊಂದುವದಕ್ಕಾಗಿಯೂ, ಕೊರಿಂಥಕ್ಕೆ ಹೋದನು. (೨ ಕೊರಿ. ೨. ೧, ೨, ೧೩; ೭. ೫—೭; ೮. ೧೬—೨೪; ೧೨. ೧೮—೨೧.) ಈ ವರ್ತಮಾನಗಳ ತರುವಾಯ ಹತ್ತು ವರುಷಗಳ ಮಟ್ಟಿಗೂ ಅವನ ಚರಿತ್ರೆ ಏನೂ ತಿಳಿಯಲಿಲ್ಲ. ತರುವಾಯ ಅವನು ಕ್ರೇತ ದ್ವೀಪದಲ್ಲಿರುವ ಸಭೆಗಳನ್ನು ಕ್ರಮ ಪಡಿಸುವದಕ್ಕಾಗಿ ಪೌಲನಿಂದ ನೇಮಿಸಲ್ಪಟ್ಟನೆಂದು ಈ ಪತ್ರಿಕೆಯಿಂದ ತಿಳಿಯ ಬರುತ್ತದೆ. (೧. ೫, ೬.) ಅರ್ತೆಮನು ಅಥವಾ ತುಕಿಕನು ಅಲ್ಲಿಗೆ ಹೋಗಿ ಶೇರಿದಾಗ ನಿಕೊಪೋಲಿ ಎಂಬ ಪಟ್ಟಣದಲ್ಲಿರುವ ಪೌಲನನ್ನು ನೋಡುವದಕ್ಕೆ ಹೋಗಿರುವನೆಂದೂ, (೩. ೧೨.) ಪೌಲನು ರೋಮಪುರಿಗೆ ಹೋದ ತರುವಾಯವಾಗಲಿ, ಅದಕ್ಕೆ ಸ್ವಲ್ಪ ಮುಂಚೆ ಆಗಲಿ ಅವನು ದಲ್ಮಾತ್ಯಕ್ಕೆ ಹೋಗಿರುವನೆಂದೂ ತೋರುತ್ತದೆ. (೨ ತಿಮೊ. ೪. ೧೦.)

ಅರ್ಥದಲ್ಲಿಯೂ ಧೋರಣೆಯಲ್ಲಿಯೂ ಸಾರಾಂಶದಲ್ಲಿಯೂ ಈ ಪತ್ರಿಕೆಗೂ ತಿಮೊಥೆಯನ ಮೊದಲನೇ ಪತ್ರಿಕೆಗೂ ಬಹಳ ಸಮ್ಮಂಧವಿರುವದರಿಂದ ಈ ಎರಡೂ ಒಂದೇ ಕಾಲದಲ್ಲಿ ಬರೆಯಲ್ಪಟ್ಟವೆಂದು ಕೆಲವರು ನೆನಸುತ್ತಾರೆ. ಈ ವಿಷಯವನ್ನು ಕುರಿತು ತಿಮೊಥೆಯನ ಮೊದಲನೇ ಪತ್ರಿಕೆಯ ಪೀಠಿಕೆಯಲ್ಲಿ ಕೆಲವು ವಿವರಗಳನ್ನು ನೋಡ ಬಹುದು.

ಕ್ರೇತದಲ್ಲಿ ಸ್ಥಾಪಿಸಲ್ಪಟ್ಟ ಸಭೆಗಳನ್ನು ಕ್ರಮ ಪಡಿಸುವದಕ್ಕಿಂತ ಮುಂಚೆ ಪೌಲನು ಆ ಸ್ಥಳವನ್ನು ಬಿಟ್ಟು ಹೊರಡುವ ಹಾಗೆ ಸಂಭವಿಸಿದ್ದರಿಂದ ತೀತನು ಆ ಸಭೆಗಳನ್ನು ವಿಚಾರಿಸುವದಕ್ಕೆ ನೇಮಿಸಲ್ಪಟ್ಟನು. ಅವನಿಗೆ ಯೋಚನೆಯಾಗಿಯೂ, ಅವನು ಸೇವೆ ಮಾಡುವದಕ್ಕೆ ಪೌಲನ ಅನುಮತಿ ಇತ್ತೆಂದು ಎಲ್ಲರಿಗೂ ತಿಳಿಯುವ ಹಾಗೆಯೂ, ಈ ಪತ್ರಿಕೆಯು ಒಂದು ವೇಳೆ ೬೪ನೇ ವರುಷದಲ್ಲಿ ಬರೆಯಲ್ಪಟ್ಟಿತು. ಆದದರಿಂದ ತಿಮೊಥೆಯನಿಗೆ ಬರೆದ ಎರಡು ಪತ್ರಿಕೆಗಳ ಹಾಗೆಯೇ ಇದು ಸಹ ಎಲ್ಲರಿಗೂ ಅನುಕೂಲವೂ ಹುದುವೂ ಆದ ಕಟ್ಟಳೆಗಳುಳ್ಳ ಪತ್ರಿಕೆಯಾಗಿದೆ.

ತೀತನ ಕೆಲಸವು ಬಹು ಕಷ್ಟವುಳ್ಳದ್ದಾಗಿತ್ತು. ಪಂಚಾಶತ್ತಿನ ಹಬ್ಬಕ್ಕೆ ಯೆರೂಸಲೇಮಿಗೆ ಹೋಗಿದ್ದ ಕ್ರೇತ ದ್ವೀಪದವರು ತಮ್ಮ ದೇಶದಲ್ಲಿ ಸುವಾರ್ತೆ ಪ್ರಸಂಗಿಸಿ ಸಭೆಯನ್ನು ಸ್ಥಾಪಿಸಿದರೆಂದು ತೋರುತ್ತದೆ. (ಅಪೊ. ಕ್ರಿ. ೨. ೧೧.) ಹೀಗೆ ಸ್ಥಾಪಿಸಲ್ಪಟ್ಟ ಸಭೆಗಳಲ್ಲಿ ಯೆಹೂದ್ಯ ಮಾರ್ಗಕ್ಕೆ ಶೇರಿದ ಕಳ್ಳ ಬೋಧಕರಿಂದ ಕಲಹಗಳು ಸಂಭವಿಸಿದವು. (೧. ೧೦, ೧೧, ೧೪; ೩. ೯.) ಕ್ರೇತದವರ ಗುಣಾತಿಶಯಗಳು ಸತ್ಯಮಾರ್ಗಕ್ಕೆ ತಕ್ಕವುಗಳಲ್ಲ. ಅವರು ದ್ರವ್ಯಾಶೆಯೂ, ವಂಚನೆಯೂ, ಝುಗಳವೂ, ದ್ರೋಹಚಿಂತೆಯೂ ಉಳ್ಳವರಾಗಿದ್ದರು. ಮತ್ತು ದುರ್ಭೋಗದಲ್ಲಿ ಆಸಕ್ತರಾಗಿಯೂ ಇದ್ದರೆಂದು ಆ ಕಾಲದಲ್ಲಿದ್ದ ಚರಿತ್ರಗಾರರು ಹೇಳಿದ್ದಾರೆ.

ಈ ಪತ್ರಿಕೆ ಕ್ಲುಪ್ತವೂ ಅರ್ಥಸಂಗ್ರಹವೂ, ಉಪದೇಶ, ನಡತೆ, ಕ್ರಮ ಮುಂತಾದ ವಿಷಯಗಳಲ್ಲಿ ಶ್ರೇಷ್ಠ ಬೋಧನೆಯೂ ಉಳ್ಳದ್ದಾಗಿದೆ. ಸಭೆಯ ಹಿರಿಯರಲ್ಲಿ ಇರ ಬೇಕಾದ ಲಕ್ಷಣಗಳೂ, (೧. ೧—೯.) ಕಳ್ಳ ಬೋಧಕರ ನಡವಡಿಕೆಗಳೂ, (೧೦—೧೬. ವ.) ನಾನಾ ಅಂತಸ್ತುಗಳುಳ್ಳವರಿಗೆ ತಕ್ಕ ಬುದ್ಧಿ ಬೋಧನೆಗಳೂ ಇದರಲ್ಲಿ ಅಡಗಿರುತ್ತವೆ. (೨. ೩. ಸಂಧಿಗಳು.)

# THE EPISTLE OF PAUL THE APOSTLE TO TITUS.

## ಅಪೊಸ್ತಲನಾದ ಪೌಲನು
# ತೀತನಿಗೆ ಬರೆದ ಪತ್ರಿಕೆ.

ಆಶೀರ್ವಾದವು.

1. [1]ದೇವರು ಆದು ಕೊಂಡವರ ವಿಶ್ವಾಸದ ಪ್ರಕಾರವಾಗಿಯೂ, [2]ಭಕ್ತ್ಯಾನುಸಾರವಾದ ಸತ್ಯದ ತಿಳುವಿ
೨ ಕೆಯ ಪ್ರಕಾರವಾಗಿಯೂ, ಸುಳ್ಳಾಡದ ದೇವರು [3]ಯುಗ ಕಾಲಗಳ ಮುಂಚೆ ವಾಗ್ದತ್ತ ಮಾಡಿ,
೩ [4]ತಕ್ಕ ಸಮಯಗಳಲ್ಲಿ, ನಮ್ಮ ರಕ್ಷಕನಾದ ದೇವರ ಅಪ್ಪಣೆಯ ಪ್ರಕಾರ ನನಗೆ ಒಪ್ಪಿಸಲ್ಪಟ್ಟ, ತನ್ನ ವಾಕ್ಯದ
೪ ಪ್ರಸಂಗದಿಂದ ಪ್ರಕಟ ಮಾಡಿದ ನಿತ್ಯಜೀವದ [5]ನಿರೀಕ್ಷೆಯಾಗಿಯೂ, ಯೇಸು ಕ್ರಿಸ್ತನ ಅಪೊಸ್ತಲನೂ,
ದೇವರ ದಾಸನೂ, ಆದ ಪೌಲನು ಹುದುವಾದ ವಿಶ್ವಾಸದ ಪ್ರಕಾರ, [6]ನಿಜ ಮಗನಾದ ತೀತನಿಗೆ—ತಂದೆ
ಯಾದ ದೇವರಿಂದಲೂ, ನಮ್ಮ ರಕ್ಷಕನಾಗಿರುವ ಕರ್ತನಾದ ಯೇಸು ಕ್ರಿಸ್ತನಿಂದಲೂ, ಕೃಪೆಯೂ, ಕರು
ಣೆಯೂ, ಸಮಾಧಾನವೂ ಆಗಲಿ.

ಹಿರಿಯರಿಗೆ ಇರ ತಕ್ಕ ಗುಣ ಲಕ್ಷಣಗಳು. ಕಳ್ಳಬೋಧಕರ ಸ್ವಭಾವವೂ ನಡತೆಯೂ.

೫ ನಾನು ನಿನಗೆ ಆಜ್ಞಾಪಿಸಿದ ಪ್ರಕಾರ ಮಿಕ್ಕಾದವುಗಳನ್ನು [7]ನೆಟ್ಟಗೆ ಮಾಡಿ, ಪಟ್ಣ ಪಟ್ಣದಲ್ಲಿ [8]ಹಿರಿಯರನ್ನು
೬ ಇರಿಸುವದಕ್ಕೋಸ್ಕರ ನಿನ್ನನ್ನು ಕ್ರೇತದಲ್ಲಿ ಬಿಟ್ಟು ಬಂದೆನು. ಒಬ್ಬನು ನಿರಪರಾಧಿಯೂ, ಒಬ್ಬಳೇ ಹೆಂಡ

1. ಅಪೊಸ್ತಲನಾದ ಪೌಲನು ಆಶೀರ್ವದಿಸಿದ ತರುವಾಯ (೧. ೧—೪.) ಕ್ರೇತದಲ್ಲಿ ತೀತನನ್ನು ಬಿಟ್ಟು ಬಂದ ಕಾರಣವನ್ನೂ, ಸಭೆಯ ಹಿರಿಯರಿಗೆ ಇರ ತಕ್ಕ ಗುಣ ಲಕ್ಷಣಗಳನ್ನೂ (೫—೯. ವ.) ಕಳ್ಳಗುರುಗಳ ನಡತೆಗಳನ್ನೂ ಹೇಳಿ, (೧೦—೧೬. ವ.) ನಾನಾ ಅಂತಸ್ತುಗಳುಳ್ಳವರಿಗೆ ತಕ್ಕ ಬೋಧನೆಗಳನ್ನು ಹೇಳಿ, (೨. ೩. ೧—೧೧. ವ.) ವಂದನೆ ಆಶೀರ್ವಾದಗಳಿಂದ ಪತ್ರಿಕೆಯನ್ನು ಮುಗಿಸುತ್ತಾನೆ. (೩. ೧೨—೧೫.)

2. ದೇವರಿಂದ ಆದು ಕೊಳ್ಳಲ್ಪಟ್ಟವರು ದೇವಭಕ್ತಿಗೆ ಹೇತುವೆಯಾದ ಸುವಾರ್ತೆಯ ಸತ್ಯಗಳನ್ನು ಕೈಕೊಳ್ಳುವ ಹಾಗೆ ಬೋಧಿಸುವದೇ ಅಪೊಸ್ತಲ ಸೇವೆಯ ಮುಖ್ಯ ಗುರಿಯು. ಕ್ರೇತದಲ್ಲಿದ್ದ ಸಭೆಯವರು ಈ ಸತ್ಯವನ್ನು ಮರೆತು ಭಕ್ತರಾಗಿ ನಡಿಯಲಿಲ್ಲವೆಂದು ಈ ಪತ್ರಿಕೆಯಿಂದ ತೋರುತ್ತದೆ.

3. ನರಸಂತತಿ ರಕ್ಷಿಸಲ್ಪಡುವದಕ್ಕೆ ದೇವರು ಆದಿಯಲ್ಲಿ ಕೊಟ್ಟ ವಾಗ್ದತ್ತದಿಂದ (ಉತ್ಪ. ೩. ೧೫.) ಆತನು ಅನಾದಿಯಲ್ಲಿ ಮಾಡಿದ್ದ ನಿರ್ಣಯವು ಈಡೇರಿತು.

4. ತಕ್ಕ ಸಮಯಗಳು ಅಂದರೆ, ದೇವರ ಚಿತ್ತಕ್ಕೆ ಸಮರ್ಪಕವಾದ ಕಾಲಗಳು. (೧ ತಿಮೊ. ೨. ೬; ೬. ೧೫.) ಪೌಲನಿಗೆ ದೇವರ ಅನಾದಿ ನಿರ್ಣಯವು ತಕ್ಕ ಕಾಲದಲ್ಲಿ ಸುವಾರ್ತೆ ಪ್ರಸಂಗಿಸಿದ್ದರಿಂದಲೇ ತಿಳಿಯ ಬಂತು.

5. ಸತ್ಯಪರನಾದ ದೇವರು ಕೊಟ್ಟ ನಿತ್ಯಜೀವದ ವಾಗ್ದತ್ತವನ್ನು ನಂಬಿ ನಿರೀಕ್ಷಿಸುವದೇ ಉತ್ತಮ ದಾಸರ ಭಕ್ತಿವಿಶ್ವಾಸಕ್ಕೂ ಅವರ ಪ್ರಯಾಸಕ್ಕೂ ಆಧಾರವಾಗಿರುತ್ತದೆ.

6. ತಿಮೊಥೆಯನ ಹಾಗೆಯೇ ತೀತನು ಸಹ ಪೌಲನ ಸದ್ಬೋಧನೆಯಿಂದ ಗುಣ ಪಟ್ಟ ಆತ್ಮಭಾವದ ಮಗನಾಗಿದ್ದದರಿಂದ, ಆವನನ್ನು ನಿಜ ಮಗನು ಅನ್ನುತ್ತಾನೆ. (೧ ತಿಮೊ. ೧. ೨.) ತಿಮೊಥೆಯನ ಹಾಗೆ ತೀತನು ಸಹ ದೇವರ ಸೇವಕನಾಗಿದ್ದದರಿಂದ ಅವನನ್ನು ಆಶೀರ್ವದಿಸಿದ ಹಾಗೆಯೇ ಇವನನ್ನು ಸಹ ಆಶೀರ್ವದಿಸುತ್ತಾನೆ.

7. ಸಭೆಗಳಲ್ಲಿ ಹಿರಿಯರನ್ನು ನೇಮಿಸಲೂ, ಕೊರತೆಯಾದವುಗಳನ್ನು ಸಂಪೂರ್ಣ ಮಾಡಿ ನೆಟ್ಟಗೆ ಮಾಡಲೂ, ಪೌಲನಿಗೆ ಅವಕಾಶವಿಲ್ಲದ್ದರಿಂದ ಅವುಗಳನ್ನೆಲ್ಲಾ ಈಡೇರಿಸುವದಕ್ಕೆ ತೀತನನ್ನು ನೇಮಿಸಿದನು.

8. ಹಿರಿಯರೆಂಬುವದೂ ಅಧ್ಯಕ್ಷರೆಂಬುವದೂ, ಸಭೆಯಲ್ಲಿ ಒಂದೇ ಅಂತಸ್ತುಳ್ಳವರನ್ನು ಕುರಿತದ್ದು. (೭. ವ.) ಇವರ ಗುಣಶೀಲಗಳನ್ನು ೧ ತಿಮೊ. ೩. ಸಂಧಿಯಲ್ಲಿ ವಿವರಿಸಲ್ಪಟ್ಟದೆ.



ತಿಯ ಗಂಡನೂ, ದುಂದುತನದ ಅಪಕೀರ್ತಿ ಇಲ್ಲದೆ, ಅವಿಧೇಯರಾಗದೆ ಇರುವ [1]ವಿಶ್ವಾಸಿಗಳಾದ ಮಕ್ಕಳು
೭ ಳ್ಳವನೂ ಆಗಿದ್ದರೆ, ಇರಿಸು. ಯಾಕಂದರೆ ಅಧ್ಯಕ್ಷನು, ದೇವರ ಉಗ್ರಾಣದವನಿಗೆ ತಕ್ಕ ಹಾಗೆ, ಅಪರಾ
ಧನೂ ಸ್ವೇಚ್ಛೆಯೂ ಕೋಪವೂ ಇಲ್ಲದೆ, ಮದ್ಯಪಾನಿಯೂ ಹೊಡದಾಡುವವನೂ ಲೋಭಿಯೂ
೮ ಆಗಿರದೆ, ಆತಿಥ್ಯಪ್ರಿಯನೂ, [2]ಸಜ್ಜನಪ್ರಿಯನೂ, ಮನಃಸ್ವಸ್ಥನೂ, ನೀತಿಯುಳ್ಳವನೂ, ಪವಿತ್ರನೂ, [3]ಸಮ್ಯ
೯ ತನೂ ಆಗಿದ್ದು, ಸ್ವಸ್ಥ ಬೋಧನೆಯಿಂದ ಬುದ್ಧಿ ಹೇಳಲೂ, ಎದುರಾಡುವವರನ್ನು ಖಂಡಿಸಲೂ ಸಮರ್ಥ
ನಾಗುವ ಹಾಗೆ, [4]ಉಪದೇಶಕ್ಕೆ ಅನುಸಾರವಾದ ನಂಬಿಕೆಯಾದ ವಾಕ್ಯವನ್ನು ಕೈಕೊಳ್ಳ ಬೇಕು.

೧೦ ಯಾಕಂದರೆ ಅನೇಕರು, [5]ಮುಖ್ಯವಾಗಿ ಪರಿಛೇದನೆಯವರು, ಅವಿಧೇಯರೂ, ಹರಟೆ ಮಾತಿನವರೂ,
೧೧ ಮೋಸಗಾರರೂ ಆಗಿದ್ದಾರೆ. ಅವರ [6]ಬಾಯಿಗಳನ್ನು ಮುಚ್ಚ ಬೇಕು; ಅವರು ದುರ್ಲಾಭಕ್ಕೋಸ್ಕರ
೧೨ ಬಾರದವುಗಳನ್ನು ಬೋಧಿಸಿ, ಪೂರ್ಣ ಮನೆಗಳನ್ನು ಹಾಳು ಮಾಡುತ್ತಾರೆ. [7]ಅವರಲ್ಲಿ ಅವರ ಸ್ವಂತ ಪ್ರ
ವಾದಿಯಾಗಿರುವ ಒಬ್ಬನು ಹೇಳಿದ್ದೇನಂದರೆ, ಕ್ರೇತ್ಯರು ಯಾವಾಗಲೂ ಸುಳ್ಳುಗಾರರೂ, ದುಷ್ಟ ಮೃಗಗಳೂ,
೧೩ ಸೋಮಾರಿಯಾದ ಹೊಟ್ಟೆಗಳೂ ಆಗಿದ್ದಾರೆ. ಈ ಸಾಕ್ಷಿಯು ಸತ್ಯವಾಗಿದೆ. ಈ ಕಾರಣದಿಂದ ಅವರು
೧೪ ವಿಶ್ವಾಸದಲ್ಲಿ ಸ್ವಸ್ಥವಾಗಿ, [8]ಯೆಹೂದ್ಯರ ಕಟ್ಟುಕಥೆಗಳನ್ನೂ, ಸತ್ಯದ ಕಡೆಯಿಂದ ತಿರುಗಿ ಕೊಳ್ಳುವ ಮ
ನುಷ್ಯರ ಕಟ್ಟಳೆಗಳನ್ನೂ, ಲಕ್ಷ್ಯ ಮಾಡದ ಹಾಗೆ, ಅವರನ್ನು ಖಂಡಿತವಾಗಿ ಗದರಿಸು.
೧೫ [9]ಶುದ್ಧರಿಗೆ ಎಲ್ಲಾ ಶುದ್ಧವೇ; ಆದರೆ ಕಳಂಕವಾದವರಿಗೂ ಅವಿಶ್ವಾಸಿಗಳಿಗೂ ಏನೂ ಶುದ್ಧವಾಗಿರುವದಿಲ್ಲ;
೧೬ ಅವರ ಬುದ್ಧಿಯೂ ಮನಸ್ಸಾಕ್ಷಿಯೂ ಕಳಂಕವಾಗಿವೆ. ಅವರು ದೇವರನ್ನು ಬಲ್ಲೆವೆಂದು ಹೇಳಿ, ಅಸಹ್ಯ
ರಾಗಿಯೂ, ಅವಿಧೇಯರಾಗಿಯೂ, ಸಕಲ ಸತ್ಕ್ರಿಯೆಗೆ ಅಪರೀಕ್ಷಿತರಾಗಿಯೂ, ಕ್ರಿಯೆಗಳಿಂದ ಅವನನ್ನು
ಬೊಂಕುತ್ತಾರೆ.

1. ಇಂಥಾ ಗುಣವಂತರಾದ ಮಕ್ಕಳುಳ್ಳ ತಂದೆಗಳೇ ಮತ್ತೊಬ್ಬರನ್ನು ಕ್ರಿಸ್ತನ ಬಳಿಗೆ ಶೇರಿಸುವ ಶ್ರೇಷ್ಠ ಉದ್ಯೋಗಕ್ಕೆ ತಕ್ಕವರು.

2. ಸಜ್ಜನಪ್ರಿಯನು ಎಂಬುವದಕ್ಕೆ ಮೂಲ ಭಾಷೆಯಲ್ಲಿ ಒಳ್ಳೇದನ್ನು ಪ್ರೀತಿ ಮಾಡುವವನು ಎಂಬದಾಗಿ ಉಂಟು. ಸಜ್ಜನರನ್ನು ಪ್ರೀತಿ ಮಾಡುವವನು ಒಳ್ಳೇದನ್ನು ಸಹ ಪ್ರೀತಿ ಮಾಡುವನು.

3. ಸಮ್ಯತನು ಅಂದರೆ ತನ್ನ ಇಚ್ಛೆಗಳನ್ನೂ ಆಶೆಗಳನ್ನೂ ಬಿಗಿ ಹಿಡಿದು ಮಿತವಾಗಿ ನಡಿಯುವವನು.

4. ಇದು ಪರಿಶುದ್ಧಾತ್ಮನ ವರಪ್ರಸಾದವನ್ನು ಹೊಂದಿದ ಅಪೊಸ್ತಲರಿಂದ ಬೋಧಿಸಲ್ಪಟ್ಟವರನ್ನು ಕುರಿತದ್ದು. ಇಂಥಾ ಬೋಧನೆ ಹೊಂದಿದವರು ಭಕ್ತರನ್ನು ಸತ್ಯದಲ್ಲಿ ಅಭಿವೃದ್ಧಿ ಹೊಂದಿಸಲೂ, ಸತ್ಯಕ್ಕೆ ವಿರೋಧಿಗಳಾದ ಶತ್ರುಗಳನ್ನು ಖಂಡಿಸಿ ಶಿಕ್ಷಿಸಲೂ ಶಕ್ತಿಯುಳ್ಳವರಾಗಿರುವರು.

5. ಗಲಾತ್ಯ ಸಭೆಯಲ್ಲಿದ್ದ ಪ್ರಕಾರ ಕ್ರೇತದ ಸಭೆಗಳಲ್ಲಿಯೂ ಕಳವಳವನ್ನೂ ಸಂದೇಹಗಳನ್ನೂ ಹುಟ್ಟಿಸಿದವರು ಮುಖ್ಯವಾಗಿ ಯೆಹೂದ್ಯರಾಗಿದ್ದರು. ಇವರು ಯೆಹೂದ್ಯ ರಬ್ಬಿಗಳ ಕಟ್ಟುಕಥೆಗಳಿಂದಲೂ, (೧೩. ವ.) ಫರಿಸಾಯರ ಸ್ವಪುಣ್ಯಬೋಧನೆಯಿಂದಲೂ ಮರುಳಾಗಿ ಸುವಾರ್ತೆಯ ಸತ್ಯಗಳನ್ನು ಮಾರ್ಪಡಿಸಿ ಹೇಳಿದರು.

6. ಅವರ ವಂಚನೆಯನ್ನೂ ದ್ರವ್ಯಾಶೆಯನ್ನೂ ತೋರಿಸಿ, ಅವರ ಬಾಯಿಗಳನ್ನು ಮುಚ್ಚ ಬೇಕು.

7. ಅವನ ಹೆಸರು ಎಪಿಮೆನಿಡಿಸ್; ಅವನು ಕ್ರೇತ ದೇಶದಲ್ಲಿ ಹುಟ್ಟಿದವನಾಗಿಯೂ, ಕ್ರಿಸ್ತನ ಮುಂಚೆ ೬೦೦ನೇ ವರುಷದಲ್ಲಿ ಇದ್ದವನಾಗಿಯೂ ತನ್ನ ದೇಶದವರಿಂದ ಪ್ರವಾದಿ ಎಂಬ ಕೀರ್ತಿ ಹೊಂದಿದವನಾಗಿಯೂ ಇದ್ದನು. ಅವರಿಂದ ಘನವಾಗಿ ಎಣಿಸಲ್ಪಟ್ಟ ಈ ಕವೀಶ್ವರನು ಅವರನ್ನು ಕುರಿತು ಹೇಳಿದ್ದು ಎಲ್ಲರೂ ಜ್ಞಾಪ್ತಿ ಮಾಡ ತಕ್ಕದ್ದಾಗಿದೆ. ಏನಂದರೆ, ಅವರು ಯಾವಾಗಲೂ ಸುಳ್ಳುಗಾರರು; ಮೂರ್ಖವೂ ವಿಷವೂ ಉಳ್ಳ ದುಷ್ಟ ಮೃಗಗಳು; ಬಹಳ ತಿನ್ನುವ ದೊಡ್ಡ ಹೊಟ್ಟೆಯುಳ್ಳ ಸೋಮಾರಿಗಳು, ಎಂದು ಹೇಳುತ್ತಾನೆ.

8. ೧ ತಿಮೊ. ೧. ೪; ೪. ೩—೮. ವಚನಗಳ ವ್ಯಾಖ್ಯಾನ ನೋಡ ಬೇಕು.

9. ಯೆಹೂದ್ಯರ ಕಟ್ಟುಕಥೆಗಳನ್ನೂ ಮನುಷ್ಯರ ಕಟ್ಟಳೆಗಳನ್ನೂ ವೇದಸತ್ಯಗಳೆಂದು ಬೋಧಿಸಿದ ಕಳ್ಳಗುರುಗಳು, ಶುದ್ಧ ವಸ್ತುಗಳು ಅಶುದ್ಧ ವಸ್ತುಗಳು ಎಂದು ವಸ್ತುಭೇದ ಮಾಡಿ ಬೋಧಿಸಿದರು. ಸತ್ಯಮಾರ್ಗವು ಅಂಥಾ ಭೇದ ಮಾಡದೆ, ಹೃದಯಶುದ್ಧತ್ವಕ್ಕೆ ತಕ್ಕದ್ದಾಗಿ ಹೊರಗಿನ ಕಾರ್ಯವಿರುವದೆಂದು ಬೋಧಿಸುತ್ತದೆ. (ಮಾರ್ಕ. ೭. ೧—೨೩. ರೋಮಾ. ೧೪. ೧—೨೩. ವಚನಗಳ ವ್ಯಾಖ್ಯಾನ ನೋಡ ಬೇಕು.) ಹೀಗೆ ಹೃದಯಶುದ್ಧಿ ಇಲ್ಲದವರು ದೇವರನ್ನು ಬಲ್ಲೆವೆಂದು ಅರಿಕೆ ಮಾಡಿದರೂ, ತಮ್ಮ ಅಸಹ್ಯವಾದ ಕ್ರಿಯೆಗಳಿಂದ ಆತನನ್ನು ಬೊಂಕುವವರಾಗಿದ್ದಾರೆ.

ಸಭೆಯಲ್ಲಿರುವ ನಾನಾ ಅಂತಸ್ತಿನವರಿಗೆ ತಕ್ಕ ಬುದ್ಧಿಬೋಧನೆಗಳು.

**2.** ಆದರೆ ನೀನು [1]ಸ್ವಸ್ಥ ಬೋಧನೆಗೆ ಯೋಗ್ಯವಾದವುಗಳನ್ನು ಮಾತಾಡು; (೨) ಏನಂದರೆ ಹಿರಿಯರು
ಎಚ್ಚರಿಕೆಯುಳ್ಳವರಾಗಿಯೂ, ಘನವುಳ್ಳವರಾಗಿಯೂ, ಮನಃಸ್ವಸ್ಥರಾಗಿಯೂ, ವಿಶ್ವಾಸ ಪ್ರೀತಿ ತಾಳ್ಮೆಗಳಲ್ಲಿ
೩ ಆರೋಗ್ಯವುಳ್ಳವರಾಗಿಯೂ, ಇರ ಬೇಕು. ಅದೇ ಪ್ರಕಾರ ಹಿರೇ ಹೆಂಗಸರು ಪರಿಶುದ್ಧರಿಗೆ ತಕ್ಕ ನಡತೆಯು
ಳ್ಳವರಾಗಿದ್ದು, [2]ಚಾಡಿಗಾರ್ತಿಯರೂ, ಬಹಳ ದ್ರಾಕ್ಷೇ ರಸಕ್ಕೆ ವಶವಾದವರೂ ಆಗಿರದೆ, ಒಳ್ಳೇದನ್ನು ಬೋ
೪ ಧಿಸುವವರಾಗಿ, ಯೌವನ ಸ್ತ್ರೀಯರಿಗೆ, ದೇವರ ವಾಕ್ಯವು ದೂಷಿಸಲ್ಪಡದ ಹಾಗೆ, ಗಂಡಂದಿರನ್ನೂ ಮಕ್ಕ
೫ ಳನ್ನೂ ಪ್ರೀತಿ ಮಾಡಿ, [3]ಮನಃಸ್ವಸ್ಥರೂ, ನಿರ್ಮಲರೂ, ಒಳ್ಳೇ ಸಂಸಾರಿಗಳೂ, ಒಳ್ಳೆಯವರೂ, ಸ್ವಂತ
ಗಂಡಂದಿರಿಗೆ ಒಳಗಾಗುವವರೂ, ಆಗಿರುವದಕ್ಕೆ ಬುದ್ಧಿ ಹೇಳ ಬೇಕು.
೬, ೭ ಅದೇ ಪ್ರಕಾರ ಯೌವನಸ್ಥರಿಗೆ, ಮನಃಸ್ವಸ್ಥವಾಗಿರ ಬೇಕೆಂದು, ಬುದ್ಧಿ ಹೇಳು. ಎಲ್ಲವುಗಳಲ್ಲಿ ನಿನ್ನನ್ನು
೮ ಸತ್ಕ್ರಿಯೆಗಳ ಮಾದರಿಯಾಗಿ ತೋರಿಸು. ಎದುರಾಳಿಯು ನಿಮ್ಮ ಮೇಲೆ ಯಾವ ಕೇಡನ್ನೂ ಹೇಳ ಕೂ
ಡದೆ [4]ನಾಚಿಕೆ ಪಡುವ ಹಾಗೆ, ಬೋಧನೆಯಲ್ಲಿ ನಿರ್ಮಲತ್ವವನ್ನೂ, ಘನತೆಯನ್ನೂ, ಯಥಾರ್ಥತ್ವವನ್ನೂ,
ಸ್ವಸ್ಥವಾದ ತಪ್ಪಿಲ್ಲದ ವಾಕ್ಯವನ್ನೂ, ತೋರಿಸು.
೯ [5]ದಾಸರು ಎಲ್ಲಾದರಲ್ಲಿ ನಮ್ಮ ರಕ್ಷಕನಾದ ದೇವರ ಬೋಧನೆಯನ್ನು ಅಲಂಕರಿಸುವ ಹಾಗೆ, ಸ್ವಂತ ಯಜ
೧೦ ಮಾನರಿಗೆ ಒಳಗಾಗಿದ್ದು, ಎಲ್ಲವುಗಳಲ್ಲಿ ಮೆಚ್ಚಿಸುವವರಾಗಿ, ಎದುರು ಮಾತಾಡದೆ, ಕದಿಯದೆ, ಎಲ್ಲಾ
ಒಳ್ಳೇ ನಂಬಿಕೆಯನ್ನು ತೋರಿಸ ಬೇಕೆಂದು, ಬುದ್ಧಿ ಹೇಳು.
೧೧, ೧೨ ಯಾಕಂದರೆ ರಕ್ಷಣೆಗಾಗಿರುವ ದೇವರ ಕೃಪೆಯು ಮನುಷ್ಯರೆಲ್ಲರಿಗೆ [6]ಪ್ರಸಿದ್ಧಿಯಾಗಿ, ನಾವು ಭಕ್ತಿಹೀ
ನತ್ವವನ್ನೂ ಲೌಕಿಕ ಆಶೆಗಳನ್ನೂ ಬಿಟ್ಟು ಬಿಟ್ಟು, ಮನಃಸ್ವಸ್ಥವಾಗಿಯೂ ನೀತಿಯಾಗಿಯೂ [7]ಭಕ್ತಿಯಾಗಿ
೧೩ ಯೂ ಈಗಿನ ಲೋಕದಲ್ಲಿ ಬದುಕಿ, ಭಾಗ್ಯವಾದ ನಿರೀಕ್ಷೆಯನ್ನೂ, ಮಹಾ ದೇವರೂ ನಮ್ಮ ರಕ್ಷಕನೂ
ಆಗಿರುವ [8]ಯೇಸು ಕ್ರಿಸ್ತನ ಮಹಿಮೆಯ ಪ್ರತ್ಯಕ್ಷತೆಯನ್ನೂ ಎದುರು ನೋಡುವ ಹಾಗೆ, ನಮ್ಮನ್ನು ಉಪ

1. ಮತ್ತೊಬ್ಬರು ಎಂಥವುಗಳನ್ನು ಬೋಧಿಸಿದಾಗ್ಯೂ, (೧. ೧೧.) ನೀನು ಸ್ವಸ್ಥ ಬೋಧನೆಗೆ ಯೋಗ್ಯವಾದವುಗಳನ್ನು ಬೋಧಿಸ ಬೇಕು. (೧ ತಿಮೊ. ೧. ೧೧. ವಚನದ ವ್ಯಾಖ್ಯಾನ ನೋಡ ಬೇಕು.) ಮತ್ತು ಆ ಬೋಧನೆಗೆ ತಕ್ಕದ್ದಾಗಿ ಸನ್ಮಾರ್ಗದಲ್ಲಿಯೂ, ವಿಶ್ವಾಸದಲ್ಲಿಯೂ, ಪ್ರೀತಿಯಲ್ಲಿಯೂ, ತಾಳ್ಮೆಯಲ್ಲಿಯೂ ಶ್ರೇಷ್ಠ ಮಾದರಿಯುಳ್ಳವನಾಗಿ ನಡಿಯ ಬೇಕು.

2. ಪರಿಶುದ್ಧ ದೇವರನ್ನು ಆರಾಧಿಸುವವರು ಪರಿಶುದ್ಧರೂ ಯೋಗ್ಯರೂ ಆಗಿ ನಡಿಯ ಬೇಕು. ಹಾಗೆಯೇ ಚಾಡಿಗಾರ್ತಿಯರೂ ಮದ್ಯಪಾನಕ್ಕೆ ದಾಸರೂ ಆಗಿರ ಬಾರದು. ಚಾಡಿಗಾರ್ತಿಯರು ಸೈತಾನನ ಮಕ್ಕಳಾಗಿದ್ದಾರೆ. ಹಾಗೆಯೇ ಮದ್ಯಪಾನ ಪ್ರಿಯರು ಸಹ ಆ ಕ್ರೂರ ಯಜಮಾನನ ದಾಸರಾಗಿದ್ದಾರೆ. (ಯೋಹಾ. ೮. ೪೪.)

3. ಗಂಡಂದಿರನ್ನೂ ಮಕ್ಕಳನ್ನೂ ಪ್ರೀತಿ ಮಾಡಿ, ಮನೆತನದ ಕೆಲಸಗಳನ್ನು ಕ್ರಮವಾಗಿ ನಡಿಸಲೂ, ಕ್ರಿಸ್ತನ ಮಾರ್ಗವನ್ನು ಅಲಂಕರಿಸುವಂತೆ ಯೋಗ್ಯವಾಗಿ ನಡಿಯಲೂ, ಬೇಕಾದರೆ, ಮನಃಸ್ವಸ್ಥತೆಯೂ ಒಳ್ಳೇ ಅಭ್ಯಾಸವೂ ಅವಶ್ಯ ಬೇಕು. ಹಿರೇ ಹೆಂಗಸರು ಯೌವನ ಸ್ತ್ರೀಯರಿಗೆ ಇಂಥಾ ಒಳ್ಳೇ ನಡತೆಯನ್ನು ಕಲಿಸಿದರೆ, ಬಹಳ ಮೇಲು ಉಂಟಾಗುವದು.

4. ಸಭೆಯವರೂ ಬೋಧಕರೂ ಪರಿಶುದ್ಧವಾಗಿಯೂ ಭಕ್ತಿಯಾಗಿಯೂ ನಡಿಯುವರಾದರೆ, ಶತ್ರುಗಳು ನಾಚಿಕೆ ಪಡುವರೆಂಬುವದಕ್ಕೆ ಸಂದೇಹವಿಲ್ಲ.

5. (೧ ತಿಮೊ. ೬. ೧, ೨. ವಚನಗಳ ವ್ಯಾಖ್ಯಾನ ನೋಡ ಬೇಕು.) ಕ್ರಿಸ್ತಮಾರ್ಗದ ಬೋಧನೆಯನ್ನು ಎಲ್ಲಾದರಲ್ಲಿ ಅಲಂಕರಿಸುವ ಹಾಗೆ ಅಪೇಕ್ಷಿಸುವ ದಾಸರಾಗಲಿ ಸೇವಕರಾಗಲಿ ಈ ವಚನಗಳಲ್ಲಿರುವ ಕಟ್ಟಳೆಗಳ ಪ್ರಕಾರ ನಡಿಯುವರು.

6. ಕ್ರಿಸ್ತನು ಅವತರಿಸಿದ್ದರಿಂದ ಸರ್ವ ಜನರಿಗೂ ರಕ್ಷಣೆಯುಂಟಾಗಲೂ, ಆ ರಕ್ಷಣೆಯ ಸುವಾರ್ತೆ ಸಾರಲ್ಪಡಲೂ ತಕ್ಕ ದೇವರ ಕೃಪೆಯು ಸೂರ್ಯೋದಯದ ಹಾಗೆ ಪ್ರಸಿದ್ಧಿಯಾಯಿತು. ದೇವರ ದಾಸರು ಪರಿಶುದ್ಧರಾಗಿರ ಬೇಕೆಂದು ಆಜ್ಞಾಪಿಸುವ ಕ್ರಿಸ್ತನ ಮಾರ್ಗವು, ಕ್ರಿಸ್ತನ ಕೃಪೆಯ ಪ್ರಸನ್ನತೆಯನ್ನೂ, ಇನ್ನು ಮೇಲೆ ಆತನು ಮಹಿಮೆಯಲ್ಲಿ ಪ್ರಸನ್ನನಾಗುವನೆಂಬ ನಂಬಿಕೆಯನ್ನೂ ಪ್ರಸಿದ್ಧಿ ಮಾಡುತ್ತದೆ. (೧೩. ವ.)

7. ಪಾಪದ ಬೇರಾದ ಭಕ್ತಿಹೀನತ್ವವನ್ನೂ, ಅದರ ಫಲವಾದ ಲೌಕಿಕ ಆಶೆಗಳನ್ನೂ ತಳ್ಳಿ ಬಿಟ್ಟು, ಸನ್ಮಾರ್ಗವಾಗಿ ನಡಿಯುವ ಸತ್ಪುತ್ರರು ತಮ್ಮ ವಿಷಯದಲ್ಲಿ ಸ್ವಸ್ಥ ಬುದ್ಧಿಯುಳ್ಳವರಾಗಿಯೂ, ಅನ್ಯರ ವಿಷಯದಲ್ಲಿ ನೀತಿಯುಳ್ಳವರಾಗಿಯೂ, ದೇವರ ವಿಷಯ ಭಕ್ತಿಯುಳ್ಳವರಾಗಿಯೂ ನಡಿಯುವರು. ಹೀಗೆ ನಡಿಯ ಬೇಕೆಂದು ಆಜ್ಞಾಪಿಸುವ ಮಾರ್ಗವು ಸತ್ಯಪರನಾದ ದೇವರಿಂದ ಉಂಟಾದ ಮಾರ್ಗವಾಗಿದೆ.

8. ಕ್ರಿಸ್ತನು ಸಕಲ ಚರಾಚರಗಳನ್ನು ಸೃಷ್ಟಿಸಿದ ಮಹಾ ದೇವರೆಂದು ಇದರಿಂದ ಪ್ರಕಟವಾಗಿದೆ. ಆತನು ಮಹಿಮೆಯಲ್ಲಿ ಪ್ರಸನ್ನನಾಗುವದನ್ನು ಆಶೆಯಿಂದ ಎದುರು ನೋಡುವದೇ ಸಭೆಯ ಲಕ್ಷಣವು.



೧೪ ದೇಶಿಸುತ್ತದೆ. ಅವನು ಸಕಲ ಅನೀತಿಯಿಂದ ನಮ್ಮನ್ನು [1]ವಿಮೋಚಿಸುವದಕ್ಕೂ, ಸತ್ಕ್ರಿಯೆಗಳಲ್ಲಿ ಆಸಕ್ತಿ
ಯಾಗಿರುವ ಸ್ವಂತ ಪ್ರಜೆಯನ್ನು ತನಗೆ ಪರಿಶುದ್ಧ ಮಾಡುವದಕ್ಕೂ, ನಮಗೋಸ್ಕರ ತನ್ನನ್ನು ಕೊಟ್ಟನು.
೧೫ ಇವುಗಳನ್ನು ಮಾತಾಡಿ, ಬುದ್ಧಿ ಹೇಳಿ, ಸಕಲ ಅಧಿಕಾರದಿಂದ ಗದರಿಸು. ಯಾವನಾದರೂ ನಿನ್ನನ್ನು
[2]ಉದಾಸೀನ ಮಾಡದಿರಲಿ.

**3.** ಅವರು [3]ಧೊರೆತನಗಳಿಗೂ ಅಧಿಕಾರಗಳಿಗೂ ಒಳಗಾಗಿ, ವಿಧೇಯರಾಗಿಯೂ ಸಕಲ ಸತ್ಕ್ರಿಯೆಗೆ ಸಿದ್ಧ
೨ ರಾಗಿಯೂ ಇದ್ದು, ಯಾರನ್ನೂ ದೂಷಿಸದೆ, ಝಗಳವಾಡದೆ, ಸಾಧುಗಳಾಗಿದ್ದು, ಮನುಷ್ಯರೆಲ್ಲರಿಗೆ
ಸಕಲ ಸಾತ್ವಿಕತ್ವವನ್ನು ತೋರಿಸ ಬೇಕೆಂದು ಅವರಿಗೆ ಜ್ಞಾಪಕ ಕೊಡು.
೩ [4]ಹ್ಯಾಗಂದರೆ ನಾವು ಸಹ ಪೂರ್ವದಲ್ಲಿ ಬುದ್ಧಿಹೀನರೂ, ಅವಿಧೇಯರೂ, ಮಾರ್ಗ ತಪ್ಪಿದವರೂ, ನಾನಾ
ಆಶೆ ಭೋಗಗಳಿಗೆ ದಾಸರೂ, ಕೆಟ್ಟತನ ಹೊಟ್ಟೆಕಿಚ್ಚುಗಳಲ್ಲಿ ಪ್ರವರ್ತಿಸುವವರೂ, ಅಸಹ್ಯರೂ, ಒಬ್ಬರನ್ನೊ
೪ ಬ್ಬರು ಹಗೆ ಮಾಡುವವರೂ ಆಗಿದ್ದೆವು. ಆದರೆ ನಮ್ಮ ರಕ್ಷಕನಾದ ದೇವರ ದಯವೂ ಮನುಷ್ಯರ ಮೇ
೫ ಲಿರುವ ಪ್ರೀತಿಯೂ [5]ಪ್ರಸಿದ್ಧಿಯಾದಾಗ, ನಾವು ಮಾಡಿದ ನೀತಿಯ ಕ್ರಿಯೆಗಳಿಂದಲ್ಲ, ತನ್ನ ಕರುಣೆಯ
೬ ಪ್ರಕಾರವೇ, ಪುನರ್ಜನ್ಮದ [6]ತೊಳೆಯುವಿಕೆಯಿಂದಲೂ, ತಾನು ನಮ್ಮ ರಕ್ಷಕನಾದ ಯೇಸು ಕ್ರಿಸ್ತನಿಂದ
೭ ಐಶ್ವರ್ಯವಾಗಿ ನಮ್ಮ ಮೇಲೆ ಹೊಯಿದ [7]ಪರಿಶುದ್ಧಾತ್ಮದ ನವೀಕರಣದಿಂದಲೂ, ನಾವು ಅವನ ಕೃಪೆ
ಯಿಂದ [8]ನೀತಿನಿರ್ಣಯ ಪಟ್ಟು, ನಿತ್ಯಜೀವದ ನಿರೀಕ್ಷೆಯ ಪ್ರಕಾರ ಬಾಧ್ಯಸ್ಥರಾಗುವ ಹಾಗೆ, ನಮ್ಮನ್ನು
ರಕ್ಷಿಸಿದನು.
೮ ನಂಬಿಕೆಯಾದ ವಾಕ್ಯವು ಇದೇ—ದೇವರನ್ನು ವಿಶ್ವಾಸಿಸಿದವರು ಸತ್ಕ್ರಿಯೆಗಳನ್ನು ನಡಿಸ ಜಾಗ್ರತೆ ಮಾ
ಡುವ ಹಾಗೆ, ಇವುಗಳನ್ನೇ ನೀನು ಸ್ಥಿರವಾಗಿ ಬೋಧಿಸ ಇಚ್ಛೈಸುತ್ತೇನೆ. ಇವು ಮನುಷ್ಯರಿಗೆ ಒಳ್ಳೆಯವುಗ
೯ ಳೂ ಪ್ರಯೋಜನವಾದವುಗಳೂ ಆಗಿವೆ. ಆದರೆ ಹುಚ್ಚು ಪ್ರಶ್ನೆಗಳಿಗೂ, ವಂಶಾವಳಿಗಳಿಗೂ, ತರ್ಕಗಳಿಗೂ,

1. ಪಾಪಾತ್ಮರನ್ನು ನ್ಯಾಯಪ್ರಮಾಣದ ಶಾಪದಿಂದ ವಿಮೋಚಿಸಿ, ರಕ್ಷಿಸಿದ ಯೇಸು ಸ್ವಾಮಿಯು ಅವರನ್ನು ಸಕಲ ಅಕ್ರಮಗಳಿಂದ ಬಿಡುಗಡೆ ಮಾಡಿ, ಸತ್ಕ್ರಿಯೆಗಳನ್ನು ಆಶೆಯಿಂದ ನಡಿಸುವ ಸ್ವಂತ ಪ್ರಜೆಯಾಗಿ ಅವರನ್ನು ಏರ್ಪಡಿಸಿದನು. (ಹೊರ. ೧೯. ೫. ೧ ಪೇತ್ರ. ೨. ೯. ಸರಿ ನೋಡ ಬೇಕು.) ಉಚಿತವಾಗಿ ಕೊಡಲ್ಪಟ್ಟ ಕೃಪೆಯ ಒಡಂಬಡಿಕೆಯಾದ ಸುವಾರ್ತೆಯು ಪಾಪಕ್ಕೆ ಸ್ಥಳ ಕೊಡುವದೆಂದು ಕೆಲವು ಭಕ್ತಿಹೀನರು ನೆನಸುವ ಪ್ರಕಾರ ಮಾಡದೆ, ಪರಿಶುದ್ಧತ್ವವನ್ನೂ ಭಕ್ತಿವೈರಾಗ್ಯವನ್ನೂ ಅನ್ಯೋನ್ಯ ಐಕ್ಯವನ್ನೂ ಉಂಟು ಮಾಡುತ್ತದೆ.

2. (೧ ತಿಮೊ. ೪. ೧೨. ವಚನದ ವ್ಯಾಖ್ಯಾನ ನೋಡ ಬೇಕು.) ಕ್ರಿಸ್ತನಿಂದ ಅಧಿಕಾರ ಹೊಂದಿ ಸತ್ಯವನ್ನು ಬೋಧಿಸಿ ಯಥಾರ್ಥವಾಗಿ ಪಕ್ಷಪಾತವಿಲ್ಲದೆ ನಡಿಯುವ ದೇವರ ಸೇವಕರನ್ನು ಯಾರೂ ಅಲಕ್ಷ್ಯ ಮಾಡ ಬಾರದು.

3. ರೋಮಾ. ೧೩. ೧—೫. ವಚನಗಳ ವ್ಯಾಖ್ಯಾನ ನೋಡ ಬೇಕು.

4. ಧೊರೆತನಗಳಿಗೆ ವಿಧೇಯರಾಗಿ, ಯಾರಿಗೂ ಕೇಡು ಮಾಡದೆ, ಎಲ್ಲರಿಗೂ ಒಳ್ಳೆಯವರಾಗಿ ನಡಿಯ ಬೇಕೆಂಬುವದಕ್ಕೆ ಕಾರಣವು ಇಲ್ಲಿ ತೋರಿಸಲ್ಪಟ್ಟದೆ. ಒಂದು ಕಾಲದಲ್ಲಿ ನಾವು ಸಹ ಅವರ ಹಾಗೆ ದುರ್ಮಾರ್ಗವಾದ ಸ್ಥಿತಿಯಲ್ಲಿದ್ದೆವು. ಈಗ ನಮಗೂ ಅವರಿಗೂ ಉಂಟಾಗಿರುವ ವ್ಯತ್ಯಾಸವು ದೇವರ ಮಹಾ ಪ್ರೀತಿಯೂ, (೪. ವ.) ಆತನ ಉಚಿತವಾದ ಕಟಾಕ್ಷವೂ, (೫. ವ.) ಕ್ರಿಸ್ತನ ಪುಣ್ಯದಿಂದ ಉಂಟಾದ ಪರಿಶುದ್ಧಾತ್ಮನ ಪುನರ್ಜನ್ಮವೂ (೬, ೭. ವ.) ಇವೇ ಕಾರಣವಾದವು.

5. (೨. ೧೧. ಲೂಕ. ೧. ೭೮, ೭೯.) ಅಜ್ಞಾನಾಂಧಕಾರದಲ್ಲಿ ಮುಣುಗಿ ನಿರ್ಬಂಧ ಸ್ಥಿತಿಯಲ್ಲಿದ್ದವರಿಗೆ ಕ್ರಿಸ್ತನಿಂದ ದೇವರ ಕೃಪೆಯು ಪ್ರಸಿದ್ಧಿಯಾದದ್ದು ಎಷ್ಟೋ ಆಶ್ಚರ್ಯವೂ ಸಂತೋಷವೂ ಆದದ್ದು.

6. ಪರಿಶುದ್ಧಾತ್ಮನಿಂದ ನವೀಕರಿಸಲ್ಪಡುವವರು ಪುನರ್ಜನ್ಮ ಹೊಂದಿದವರಾಗಿದ್ದಾರೆ. ಆತ್ಮನ ಸ್ನಾನವಾದ ಈ ಅಂತರ್ಯಸ್ನಾನ ಹೊಂದಿದವರು ಅದಕ್ಕೆ ಗುರುತಾಗಿಯೂ ಸಾಕ್ಷಿಯಾಗಿಯೂ ಇರುವ ಹೊರಗಿನ ಜಲಸ್ನಾನವನ್ನು ಸಹ ಹೊಂದ ಬೇಕು. (ಅಪೊ. ಕ್ರಿ. ೨೨. ೧೬. ೧ ಪೇತ್ರ. ೩. ೨೧.) ಇದೇ ರಕ್ಷಕನು ಹೇಳಿದ ಪ್ರಕಾರ, ಆತ್ಮನಿಂದಲೂ ನೀರಿನಿಂದಲೂ ತಿರಿಗಿ ಹುಟ್ಟುವದು. (ಯೋಹಾ. ೩. ೫. ವಚನದ ವ್ಯಾಖ್ಯಾನ ನೋಡ ಬೇಕು.)

7. ತನ್ನ ಸಮುಖದಲ್ಲಿ ನೀತಿನಿರ್ಣಯ ಪಟ್ಟವರಾಗ ಮಾಡುವ ವಿಶ್ವಾಸವನ್ನು ನಮ್ಮಲ್ಲಿ ಉಂಟು ಮಾಡುವದಕ್ಕಾಗಿ, ಕೃಪೆಯುಳ್ಳ ದೇವರು ತನ್ನ ಪರಿಶುದ್ಧಾತ್ಮನ ಮಳೆಯನ್ನು ನಮ್ಮ ಮೇಲೆ ಹೊಯಿದಿದ್ದಾನೆ.

8. ೪—೭. ವರಿಗೂ ಇರುವ ವಚನಗಳನ್ನು ಯೋಚಿಸುವಾಗ, ಮನುಷ್ಯರ ರಕ್ಷಣೆಯ ವಿಷಯದಲ್ಲಿ ತಂದೆ, ಕುಮಾರ, ಪರಿಶುದ್ಧಾತ್ಮನೆಂಬ ತ್ರಯ್ಯೈಕ ದೇವರು ಮಾಡುವ ತ್ರಿಕರ್ಮಗಳು ಪ್ರಕಟವಾಗಿ ತೋರುತ್ತವೆ.

ನ್ಯಾಯಪ್ರಮಾಣದ ಝುಗಳಗಳಿಗೂ [1]ದೂರವಾಗಿರು. ಯಾಕಂದರೆ ಅವು ನಿಷ್ಪ್ರಯೋಜಕವೂ ವ್ಯರ್ಥವೂ
೧೦ ಆಗಿವೆ. [2]ಪಾಷಂಡನಾದ ಮನುಷ್ಯನನ್ನು ಒಂದೆರಡು ಸಾರಿ ಬುದ್ಧಿ ಹೇಳಿದ ಮೇಲೆ ತಳ್ಳಿ ಬಿಡು.
೧೧ ಇಂಥವನು ತಬ್ಬಿಬ್ಬಾಗಿ, ತನಗೆ ತಾನೇ ಆಜ್ಞೆತೀರಿಸಿದವನಾಗಿ, ಪಾಪ ಮಾಡುತ್ತಾನೆಂದು ತಿಳಿದಿರು.

ಆಶೀರ್ವಾದವು.

೧೨ ನಾನು ಅರ್ತೆಮನನ್ನಾಗಲಿ, ತುಕಿಕನನ್ನಾಗಲಿ, ನಿನ್ನ ಹತ್ತರ ಕಳುಹಿಸಿದಾಗ, [3]ನಿಕೊಪೋಲಿಗೆ ನನ್ನ ಬಳಿಗೆ
೧೩ ಬರ ಜಾಗ್ರತೆ ಪಡು; ಯಾಕಂದರೆ ಅಲ್ಲಿ ಹಿಮಕಾಲ ಕಳೆಯ ನಿರ್ಣಯಿಸಿ ಕೊಂಡಿದ್ದೇನೆ. ನ್ಯಾಯಶಾಸ್ತ್ರಿ
ಯಾದ [4]ಜೇನನನ್ನೂ ಅಪೊಲ್ಲೋಸನನ್ನೂ, ಅವರು ಯಾವದರಲ್ಲಿಯೂ ಕೊರತೆ ಪಡದ ಹಾಗೆ, ಜಾಗ್ರತೆ
೧೪ ಯಾಗಿ ಮುಂಕಳುಹಿಸು. ಮತ್ತು [5]ನಮ್ಮವರು ಸಹ [6]ನಿಷ್ಫಲರಾಗಿರದ ಹಾಗೆ, ಅವಶ್ಯವಾದ ಕಾರ್ಯಗಳ
೧೫ ಗೋಸ್ಕರ ಸತ್ಕ್ರಿಯೆಗಳನ್ನು ನಡಿಸ ಕಲಿಯಲಿ. ನನ್ನ ಸಂಗಡ ಇರುವವರೆಲ್ಲರು ನಿನ್ನನ್ನು ವಂದಿಸುತ್ತಾರೆ.
ವಿಶ್ವಾಸದಲ್ಲಿ ನಮ್ಮನ್ನು ಸ್ನೇಹಿಸುವವರನ್ನು ವಂದಿಸು. ಕೃಪೆಯು ನಿಮ್ಮೆಲ್ಲರ ಸಂಗಡ ಇರಲಿ. ಆಮೆನ್.

1. (೧ ತಿಮೊ. ೧. ೪. ವಚನದ ವ್ಯಾಖ್ಯಾನ ನೋಡ ಬೇಕು.) ವಾಗ್ವಾದದಿಂದ ಝುಗಳವೂ, ಝುಗಳದಿಂದ ವೇದಭ್ರಷ್ಟತ್ವವೂ ಉಂಟಾಗುವದರಿಂದ, ಇವುಗಳೆಲ್ಲಾ ನಿಷ್ಪ್ರಯೋಜನವಾದವುಗಳೆಂದು ಗ್ರಹಿಸಿ ಅವುಗಳನ್ನು ಬಿಟ್ಟು ದೂರವಾಗಿರ ಬೇಕು.

2. ತನ್ನ ಸ್ವಂತ ಅಭಿಪ್ರಾಯಗಳೇ ಸರಿ ಎಂದು ನಂಬಿ, ಸಭೆಯಲ್ಲಿ ಭೇದವನ್ನು ಉಂಟು ಮಾಡುವ ಮನುಷ್ಯನೇ ಪಾಷಂಡನು. (ಗಲಾ. ೪. ೧೭.) ಇಂಥವನು ಉತ್ತಮರ ಒಳ್ಳೇ ಆಲೋಚನೆಯನ್ನು ಕೇಳದೆ, ತನ್ನ ಅಭಿಪ್ರಾಯವೇ ಸರಿ ಎಂದು ಸಾಧಿಸುವನಾದರೆ, ಅವನು ಸಭೆಯಲ್ಲಿ ಸೇವೆ ಮಾಡುವದಕ್ಕೂ ಅನ್ಯೋನ್ಯ ಐಕ್ಯವಾಗಿರುವದಕ್ಕೂ ಅಪಾತ್ರನಾಗಿರುವದರಿಂದ ಅವನನ್ನು ಬಿಟ್ಟು ತೊಲಗ ಬೇಕು. ಅವನು ಸಭೆಯ ಯೋಚನೆ ಕೇಳದೆ ಮತವಿಷಯದಲ್ಲಿ ತನ್ನ ಸ್ವೇಚ್ಛೆಯ ಪ್ರಕಾರ ನಡಿಯ ತೀರ್ಮಾನವುಳ್ಳವನಾಗಿರುವದರಿಂದ ತನ್ನಲ್ಲಿ ತನಗೆ ಆಜ್ಞೆ ನಿರ್ಣಯಿಸಲ್ಪಟ್ಟಿರುವನು. (೧೧. ವ.) ಹೀಗೆ ತೃಣೀಕರವಾಗಿ ಪಾಪ ಮಾಡುವವನನ್ನು ಬಿಟ್ಟು (ಇಬ್ರೀ. ೧೦. ೨೬.) ಅವಶ್ಯವಾಗಿ ತೊಲಗ ಬೇಕು. (ಮತ್ತಾ. ೧೮. ೧೭. ೨ ಯೋಹಾ. ೧೦. ವ.)

3. ಆ ಕಾಲದಲ್ಲಿದ್ದ ಅನೇಕ ಪಟ್ಣಗಳಿಗೆ ನಿಕೊಪೋಲಿ ಎಂಬ ಹೆಸರಿತ್ತು. ಆದರೆ ಇಲ್ಲಿ ಹೇಳಲ್ಪಡುವ ನಿಕೊಪೋಲಿ ಎಂಬುವದು ಎಪ್ಯೆರಸ್ ಎಂಬ ಶೀಮೆಯಲ್ಲಿದ್ದ ಪಟ್ಣವೆಂದು ತೋರುತ್ತದೆ.

4. ಜೇನನು ಎಂಬವನು ರೋಮಾ ನ್ಯಾಯಶಾಸ್ತ್ರಿಯಾಗಿ ಅಥವಾ ಯೆಹೂದ್ಯರ ನ್ಯಾಯಶಾಸ್ತ್ರಿಯಾಗಿ ಇರುವನು. ಅವನಿಗೂ ಅಪೊಲ್ಲೋಸನಿಗೂ ಪ್ರಯಾಣಕ್ಕೆ ಬೇಕಾದ ಸಾಮಾನುಗಳನ್ನು ಅನುಕೂಲ ಪಡಿಸಿ ಕೊಟ್ಟು, ಸ್ವಲ್ಪ ದೂರ ಅವರನ್ನು ಸಾಗ ಕಳುಹಿಸ ಬೇಕೆಂಬುವದು ಪೌಲನ ತಾತ್ಪರ್ಯವು.

5. ನಮ್ಮವರು ಎಂಬುವದು ಕ್ರಿಸ್ತನ ಶರಣಾಗತರಾದ ನಮ್ಮ ಸಹೋದರರೆಂಬ ಅರ್ಥವಾಗುವದು. (ರೋಮಾ. ೧೨. ೧೩.)

6. ನಿಷ್ಫಲರಾಗಿರದೆ, ದೇವರಿಗೆ ಸಮರ್ಪಕವಾದ ಫಲ ಕೊಡುವವರಾಗಿರ ಬೇಕಾದರೆ, ಜಾಗ್ರತೆಯಿಂದ ಕೆಲಸ ಮಾಡುವವರಾಗಿಯೂ ಸತ್ಕ್ರಿಯೆಗಳನ್ನು ಮಾಡುವವರಾಗಿಯೂ ಇರ ಬೇಕು.

# THE EPISTLE OF PAUL THE APOSTLE TO PHILEMON.

## ಅಪೊಸ್ತಲನಾದ ಪೌಲನು ಫಿಲೆಮೋನನಿಗೆ ಬರೆದ ಪತ್ರಿಕೆಯ ಪೀಠಿಕೆ.

ಫಿಲೆಮೋನನೆಂಬವನು ಕೊಲೊಸ್ಸೆ ಪಟ್ಣದವನಾಗಿಯೂ, (೨ನೇ ವಚನವನ್ನೂ ಕೊಲೊ. ೪. ೧೭. ವಚನವನ್ನೂ, ೧೦—೧೨. ವಚನಗಳನ್ನೂ ಕೊಲೊ. ೪. ೯. ವಚನವನ್ನೂ ಸರಿ ನೋಡ ಬೇಕು.) ಪೌಲನ ಪ್ರಸಂಗವನ್ನು ಕೇಳಿ, ಕ್ರಿಸ್ತನನ್ನು ವಿಶ್ವಾಸಿಸಿದವನಾಗಿಯೂ, (೧೯. ವ.) ಸುವಾರ್ತೆಯ ಸತ್ಯವನ್ನು ಎಲ್ಲಾ ಕಡೆಗಳಲ್ಲಿ ಪ್ರಸಿದ್ಧಿ ಮಾಡುವದಕ್ಕೆ ಪೌಲನಿಗೆ ಜತೆಕೆಲಸದವನಾಗಿಯೂ, ಭಕ್ತಿಯುಳ್ಳ ಕುಟುಂಬಕ್ಕೆ ಮುಖ್ಯಸ್ಥನಾಗಿಯೂ ಇದ್ದನು.

ಈ ಪತ್ರಿಕೆಯನ್ನು ಬರೆದ ಕಾರಣವೂ ಗುರಿಯೂ ಇದರಲ್ಲಿ ಸ್ಪಷ್ಟವಾಗಿ ತೋರುತ್ತದೆ. ಫಿಲೆಮೋನನಿಗೆ ದಾಸನ ಕೆಲಸ ಮಾಡಿ ಕೊಂಡಿದ್ದ ಒನೇಸಿಮನೆಂಬವನು ತನ್ನ ಯಜಮಾನನನ್ನು ವಂಚಿಸಿ, (೧೮. ವ.) ಓಡಿ ಹೋದ ಸಮಯದಲ್ಲಿ ದೈವಸಂಕಲ್ಪದಿಂದ ರೋಮಪುರಿಗೆ ಹೋಗಿ ಅಲ್ಲಿ ಸೆರೆಯಲ್ಲಿದ್ದ ಪೌಲನ ಪ್ರಸಂಗವನ್ನು ಕೇಳಿ, ಗುಣ ಪಟ್ಟು, ಕ್ರಿಸ್ತನ ದಾಸನಾದನು. ಹೀಗೆ ಅವನು ಗುಣ ಪಟ್ಟ ತರುವಾಯ ಸದ್ಗುಣ ಸತ್ಕ್ರಿಯೆಗಳುಳ್ಳವನಾಗಿಯೂ, ತನಗೆ ಬಹಳ ಪ್ರಯೋಜಕನಾಗಿಯೂ ಇದ್ದದರಿಂದ, ಅವನನ್ನು ಪೌಲನು ತನ್ನ ಬಳಿಯಲ್ಲಿಯೇ ಇಟ್ಟು ಕೊಳ್ಳುವದಕ್ಕೆ ಮನಸ್ಸಾಗಿದ್ದನು. ಆದರೂ ಅವನು ತನ್ನ ಯಜಮಾನನ ಬಳಿಗೆ ತಿರಿಗಿ ಹೋಗುವದು ನ್ಯಾಯವೆಂದು ಆಲೋಚಿಸಿ, ತುಕಿಕನು ಎಫೆಸಕ್ಕೂ ಕೊಲೊಸ್ಸೆಗೂ ಹೋದಾಗ ಒನೇಸಿಮನನ್ನು ಅವನ ಸಂಗಡ ಕಳುಹಿಸಿದನು. ಹಾಗೆಯೇ ಅವನು ಹೋಗುವ ಸಮಯದಲ್ಲಿ ಈ ಪತ್ರಿಕೆಯನ್ನು ಬರೆದು ಅವನ ಕೈಯಲ್ಲಿ ಕೊಟ್ಟು ಕಳುಹಿಸಿದನು. ಕೊಲೊಸ್ಸೆಯರಿಗೆ ಬರೆದ ಪತ್ರಿಕೆಯಲ್ಲಿ ಒನೇಸಿಮನನ್ನು ಕುರಿತು ಮೆಚ್ಚಿಕೆಯಾಗಿ ಬರೆದಿದ್ದಾನೆ. (ಕೊಲೊ. ೪. ೭—೯.) ಈ ಪತ್ರಿಕೆಯಲ್ಲಿ ದೈವಕೃಪೆಯಿಂದ ವಿಶೇಷವಾಗಿ ಅವನಿಗುಂಟಾದ ಮಾರ್ಪಡುವಿಕೆಯನ್ನು ತೋರಿಸಿ, ಇನ್ನು ಮೇಲೆ ಅವನನ್ನು ಸೇವಕನ ಹಾಗೆ ಮಾತ್ರವಲ್ಲ, ಪ್ರಿಯ ಸಹೋದರನ ಹಾಗೆಯೂ ಫಿಲೆಮೋನನು ಅವನನ್ನು ಅಂಗೀಕರಿಸಿ ತೆಗೆದು ಕೊಳ್ಳ ಬೇಕೆಂದು ಹೇಳಿ ಇದೆ.

ಫಿಲೆಮೋನನನ್ನು ಆಶೀರ್ವದಿಸಿದ ತರುವಾಯ, ಅವನ ಗುಣಶೀಲಕ್ಕಾಗಿ ದೇವರನ್ನು ಸ್ತುತಿಸಿ, (೧—೭.ವ.) ಅವನ ಸಂಗಡ ಅಧಿಕಾರದಿಂದ ಮಾತಾಡ ತಕ್ಕ ಬಾಧ್ಯತೆ ಇದ್ದಾಗ್ಯೂ, ಅವನು ಹಾಗೆ ಮಾಡದೆ, ಸುವಾರ್ತೆಯ ನಿಮಿತ್ತ ಕಟ್ಟಲ್ಪಟ್ಟವನಾಗಿಯೂ ವೃದ್ಧನಾಗಿಯೂ ಇದ್ದ ಪೌಲನು ಬಹು ದಯವಾಗಿ ಮಾತಾಡುತ್ತಾನೆ. (೮, ೯. ವ.) ಒನೇಸಿಮನು ಮಾಡಿದ ಅಪರಾಧವನ್ನು ಒಪ್ಪಿಕೊಂಡು, ದಯಾಪರನಾದ ದೇವರಿಂದ ಅವನಲ್ಲಿ ಉಂಟಾದ ಗುಣ ಪಡುವಿಕೆಯನ್ನು ಹೇಳಿ, ಇನ್ನು ಅವನನ್ನು ದಾಸನ ಹಾಗಲ್ಲ, ಪ್ರಿಯ ಸಹೋದರನ ಹಾಗೆ ನಡಿಸ ಬೇಕೆಂದು ಬೇಡಿ ಕೊಳ್ಳುತ್ತಾನೆ. (೧೦—೧೭.ವ.) ಫಿಲೆಮೋನನು ಒನೇಸಿಮನಿಂದ ನಷ್ಟ ಪಟ್ಟಿದ್ದರೆ, ಅದನ್ನು ತಾನು ಸಲ್ಲಿಸುವೆನೆಂದು ಮಾತು ಕೊಟ್ಟು, (೧೮—೨೦.ವ.) ನಂಬಿಕೆಯಿಂದಲೂ ವಂದನೆಯಿಂದಲೂ ಪತ್ರಿಕೆಯನ್ನು ಮುಗಿಸುತ್ತಾನೆ.

ಇದು ಎಫೆಸ್ಯರ ಪತ್ರಿಕೆಯೂ ಕೊಲೊಸ್ಸೆಯರ ಪತ್ರಿಕೆಯೂ ಬರೆಯಲ್ಪಟ್ಟ ಕಾಲದಲ್ಲಿ ೬೩ನೇ ವರುಷದಲ್ಲಿ ಬರಿಯಲ್ಪಟ್ಟಿತೆಂದು ತೋರುತ್ತದೆ. ಕ್ರಿಸ್ತನ ಮಾರ್ಗದಿಂದುಂಟಾಗುವ ಧರ್ಮಗುಣವೂ, ಪರೋಪಕಾರಚಿಂತೆಯೂ, ಉಪಚಾರವೂ, ಈ ಪತ್ರಿಕೆಯಲ್ಲಿ ಮಾಣಿಕ್ಯದಂತೆ ಪ್ರಕಾಶಿಸುತ್ತವೆ. ಯಜಮಾನರೆಲ್ಲರೂ ಫಿಲೆಮೋನನ ಹಾಗೆಯೂ, ಸೇವಕರೆಲ್ಲರೂ ಒನೇಸಿಮನ ಹಾಗೆಯೂ, ಯೇಸು ಕ್ರಿಸ್ತನ ಮಹಾ ಪ್ರೀತಿಯನ್ನು ಗ್ರಹಿಸಿ, ತಾಳ್ಮೆಯುಳ್ಳವರಾಗಿಯೂ ಪರಿಶುದ್ಧರಾಗಿಯೂ ನಡೆದರೆ, ನಾನು ದೊಡ್ಡವನು, ನೀನು ಚಿಕ್ಕವನು ಎಂಬ ಗರ್ವವಾದ ಆಲೋಚನೆಗಳೂ ಜಾತಿಭೇದಗಳೂ ಬಹು ಶೀಘ್ರವಾಗಿ ನಿವರ್ತಿಯಾಗಿ ಹೋಗುವವು.